ದಿಃ 10-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರವಾಗಿ ಶ್ರೀ ಎ.ಎ.ಪಿ. ರವರಿಂದಃ-**

**11.** ದಾವಾ ಆಸ್ತಿಗೆ ಸಂಬಂಧಪಟ್ಟಂತೆ Land Reforms ಕಾಯ್ದೆ ಬಂದ ನಂತರ ಫಾರಂ ನಂ.7 ನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಫಾರಂ ನಂ.7 ನ್ನು ಸಲ್ಲಿಸಿರುವುದಿಲ್ಲ, ಆದರೆ ನಾವು ಬಾಂಬೆ ಟೆನೆನ್ಸಿ ಕಾಯ್ದೆ 1948 ರ ಅಡಿಯಲ್ಲಿ ನಾವೇ ಮಾಲೀಕರು ಇರುತ್ತೇವೆ ಎಂದು ನುಡಿಯುತ್ತಾರೆ. ಬಾಂಬೆ ಟೆನೆನ್ಸಿ 1948 ರ ಕಾಯ್ದೆಯು ಕರ್ನಾಟಕ ಭೂ ಸುಧಾರಣೆ ಕಾಯ್ದೆ ಬಂದ ನಂತರ ಸದರಿ ಕಾಯ್ದೆಯು ಅನ್ವಯಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಬಾಂಬೆ ಟೆನೆನ್ಸಿ ಕಾಯ್ದೆ 1948 ರ ಕಾಯ್ದೆಯು ಬರದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಾಂಬೆ ಟೆನೆನ್ಸಿ ಕಾಯ್ದೆ 1948 ರ ಅಡಿಯಲ್ಲಿ ಮಾಲೀಕತ್ವವನ್ನು ಕೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರುಗಳ ಮಾಲೀಕತ್ವದ ಕಲಂಗಳಲ್ಲಿ ನಮ್ಮ ಹೆಸರುಗಳನ್ನು ಹಚ್ಚಿಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ದಾವೆ ದಾಖಲಿಸುವ ಸಂದರ್ಭದಲ್ಲಿ ನಿಪಿ-1 ರ ದಾಖಲೆಯ ಮಾಲೀಕತ್ವದ ಕಲಂ ನಲ್ಲಿ 1 ರಿಂದ 3 ನೇ ಪ್ರತಿವಾದಿಗಳ ಹೆಸರುಗಳು ದಾಖಲಾಗಿತ್ತು ಎಂದರೆ ಸರಿ, ಸಾಕ್ಷಿಯು ಮುಂದುವರೆದು ಪೋಕಳದಲ್ಲಿ 1 ರಿಂದ 3 ನೇ ಪ್ರತಿವಾದಿಗಳು ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಾಕ್ಷಿಯ ಮುಂದುವರೆದ ಉತ್ತರಕ್ಕೆ ಪ್ರತಿವಾದಿಯರ ಪರ ವಕೀಲರು ತಕರಾರನ್ನು ಮಾಡಿರುತ್ತಾರೆ, ಸದರಿ ತಕರಾರಿಗೆ ಒಳಪಟ್ಟು ಸಾಕ್ಷಿಯ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು . ತಹಶೀಲ್ದಾರ್ ಕಛೇರಿಯಲ್ಲಿ ಪ್ರತಿವಾದಿಯರ ವಾರಸಾ ದಾಖಲೆಗಳನ್ನು ನೋಡಿಕೊಂಡು ಅವರ ಹೆಸರುಗಳನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

**12.** ನಿಪಿ-13 ರ ಕುಟುಂಬ ಉತ್ತರ ಜೀವಿತದ ಪ್ರಮಾಣ ಪತ್ರವನ್ನು ಬರ್ಮಪ್ಪ ಬಾಳಪ್ಪ ಹೊಲೆಯರ್ ಅಲಿಯಾಸ್ ಪಿರಗಣ್ಣನವರ್, ಚಂದ್ರವ್ವ ಬಾಳಪ್ಪ ಹೊಲೆಯರ್ ಅಲಿಯಾಸ್ ಪಿರಗಣ್ಣನವರ್ ಮತ್ತು ಬಾಳಪ್ಪ ಬಾಳಪ್ಪ ಹೊಲೆಯರ್ ಅಲಿಯಾಸ್ ಪಿರಗಣ್ಣನವರ್ ರವರು ವಾರಸುದಾರರು ಇರುತ್ತಾರೆ ಎಂದು ನಾವೇ ನಿಪಿ-13 ರ ದಾಖಲೆಯನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಅದು ತಪ್ಪಾಗಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-13 ರಲ್ಲಿ ಹೊಲೆಯರ್ ಎಂಬ ಪದವನ್ನು ಹೊರತುಪಡಿಸಿ ಉಳಿದ ಹೆಸರುಗಳು ನಿಜ ಇರುತ್ತವೆ ಎಂದರೆ ಸರಿ. ಯಲ್ಲವ್ವ ಬಸಪ್ಪ ಹೊಲೆಯರ್ ಉರುಫ್ ಪಿರಗಣ್ಣನವರ್ ರವರು ಮೃತರಾಗಿರುತ್ತಾರೆ ಎಂದು ಬರ್ಮಪ್ಪ ಬಾಳಪ್ಪ ಹೊಲೆಯರ್ ಅಲಿಯಾಸ್ ಪಿರಗಣ್ಣನವರ್ , ಚಂದ್ರವ್ವ ಬಾಳಪ್ಪ ಹೊಲೆಯರ್ ಅಲಿಯಾಸ್ ಪಿರಗಣ್ಣನವರ್ ಮತ್ತು ಬಾಳಪ್ಪ ಬಾಳಪ್ಪ ಹೊಲೆಯ ಅಲಿಯಾಸ್ ಪಿರಗಣ್ಣನವರ್ ರವರು ವಾರಸುದಾರರು ಇರುತ್ತಾರೆ ಎಂದು ದಾಖಲೆಯನ್ನು ನೀಡಲಾಗಿದೆ ಎಂದರೆ ಸಾಕ್ಷಿಯು ಅದು ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-13 ರ ದಾಖಲೆಯು ಖೊಟ್ಟಿಯಾಗಿರುತ್ತದೆ ಎಂದು ಪ್ರಕರಣವನ್ನು ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ಸಹಾಯಕ ಕಮೀಷನರ್ ರವರಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ನುಡಿಯುತ್ತಾರೆ. ಸಹಾಯಕ ಕಮೀಷನರ್ ರವರಲ್ಲಿ ಮಾಡಿದ ಪ್ರಕರಣ ಸಂಖ್ಯೆ ಎಷ್ಟು ಎಂದರೆ ಸಾಕ್ಷಿಯು 176 ಮತ್ತು 177 ಎಂದು ನುಡಿಯುತ್ತಾರೆ. 176 ಮತ್ತು 177 ರ ಸದರಿ ಪ್ರಕರಣಗಳನ್ನು ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ದಾಖಲಿಸಲಾಗಿತ್ತು ಎಂದರೆ ಸಾಕ್ಷಿಯು ಪೋಕಳ್ ಆಗಿ ದಾಖಲಾದ ಹೆಸರುಗಳನ್ನು ತೆಗೆದುಹಾಕಲು ಪ್ರಕರಣಗಳನ್ನು ದಾಖಲಿಸಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ಪ್ರಕರಣಗಳು ನಮ್ಮಂತೆಯೇ ಆಗಿದ್ದು ನ್ಯಾಯಾಲಯದ ಆದೇಶದ ಮೇರೆಗೆ ನಮ್ಮ ಹೆಸರುಗಳನ್ನು ದಾಖಲಿಸಲು ಆದೇಶವಾಗಿತ್ತು ಎಂದು ನುಡಿಯುತ್ತಾರೆ.

**13.** ಡೈರಿ ಸಂಖ್ಯೆ 860, 123, 149 ರಲ್ಲಿ ನಮ್ಮ ಪರವಾಗಿ ಆದೇಶವಾಗಿದ್ದು, ನಮ್ಮ ಹೆಸರನ್ನು ದಾಖಲಿಸಲು ಸದರಿ ಆದೇಶದಲ್ಲಿ ಮಾಡಲಾಗಿತ್ತು . ನಮ್ಮ ಹೆಸರನ್ನು ದಾಖಲಿಸಿಕೊಳ್ಳಲು ಆದ ಆದೇಶದ ಕುರಿತು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಜಿಲ್ಲಾ ಕಮೀಷನರ್ ರವರ ಮುಂದೆ ಸಲ್ಲಿಸಿದ ಮೇಲ್ಮನವಿಗಳು ವಿಚಾರಣಾ ಹಂತದಲ್ಲಿ ಇರುತ್ತವೆ ಎಂದರೆ ಸರಿ. ದಾವೆ ದಾಖಲಿಸಿದ ನಂತರ ಸಹಾಯಕ ಕಮೀಷನರ್ ರವರಲ್ಲಿ ದಾಖಲಿಸಿದ ಪ್ರಕರಣಗಳಾಗಿರುತ್ತವೆ ಎಂದರೆ ಸಾಕ್ಷಿಯು ದಾವೆ ದಾಖಲಿಸುವ ಪೂರ್ವದಲ್ಲಿನ ಪ್ರಕರಣಗಳು ಎಂದು ನುಡಿಯುತ್ತಾರೆ. ಸದರಿ

ಸಹಾಯಕ ಕಮೀಷನರ್ ರವರ ಆದೇಶದಲ್ಲಿ ಸಿವಿಲ್ ನ್ಯಾಯಾಲಯದ ಅಂತಿಮ ಆದೇಶವು ಉಭಯಪಕ್ಷಗಾರರಿಗೆ ಬಂಧನಕಾರಿಯಾಗಿರುತ್ತದೆ ಎಂಬ ಆದೇಶ ಇರುತ್ತದೆ ಎಂದರೆ ಸರಿ. ಸಹಾಯಕ ಕಮೀಷನರ್ ರವರ ಆದೇಶದಲ್ಲಿ ನಮ್ಮ ಮಾಲೀಕತ್ವದ ಆದೇಶವನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮಾಲೀಕತ್ವದ ಆದೇಶವನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಹಾಯಕ ಕಮೀಷನರ್ ರವರ ಆದೇಶದಲ್ಲಿ ನಮ್ಮ ಮಾಲೀಕತ್ವದ ಆದೇಶವನ್ನು ಮಾಡದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ-13 ರ ದಾಖಲೆಯನ್ನು ಮೃತಳಾದ ಯಲ್ಲವ್ವ ಕೋಂ ಬಸಪ್ಪ ಹೊಲೆಯರ್ ಅಲಿಯಾಸ್ ಪಿರಗಣ್ಣನವರ್ ರವರ ವಾರಸುದಾರರು ನಿಪಿ-13 ರಲ್ಲಿ ನಮೂದಿಸಿದಂತೆ ಇರುತ್ತದೆ ಎಂದು ಸಂಪೂರ್ಣವಾಗಿ ವಿಚಾರಣೆ ಮಾಡಿ ದಾಖಲೆಯನ್ನು ನೀಡಿದ್ದು ಅದು ಸರಿಯಾದ ದಾಖಲೆಯಾಗಿರುತ್ತದೆ ಎಂದರೆ ಸಾಕ್ಷಿಯು ಅದು ಸುಳ್ಳು ದಾಖಲೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**
**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**